ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 08-02-1976.

# *ಕನೆಕ್ಷನ್ ಮತ್ತು ಕರೆಕ್ಷನ್‌ನ ಬ್ಯಾಲೆನ್ಸ್‌ನಿಂದ ಕಮಾಲ್*

(कनेक्शन और करेक्शन के बैलेन्स से कमाल)

**ಯದಾರ್ಥ ಶಿಕ್ಷಕರ ವಿಶೇಷತೆಗಳನ್ನು ತಿಳಿಸುತ್ತಾ ಪರಮ ಶಿಕ್ಷಕ ಶಿವ ಪರಮಾತ್ಮ ಹೇಳಿದರು.**

ಶಿಕ್ಷಕಿಯರು ವಿಶೇಷವಾಗಿ ಎರಡು ಮಾತುಗಳಲ್ಲಿ ಗಮನವನ್ನಿಡಬೇಕು – ಆ ಎರಡು ಮಾತು ಯಾವುವು? ಮಧುಬನದೊಂದಿಗೆ, ತಂದೆಯ ಜೊತೆ ಹಾಗೂ ದೈವೀಪರಿವಾರದ ಜೊತೆ ಮರ್ಯಾದಾ ಪೂರ್ವಕವಾದ ಸಂಬಂಧವಿರಬೇಕು. ಮರ್ಯಾದಾಪೂರ್ವಕವಾಗಿರುವ ಸಂಬಂಧವು ಇದಾಗಿದೆ- ಯಾವುದೆಲ್ಲಾ ಸಂಕಲ್ಪ ಅಥವಾ ಕರ್ಮವನ್ನು ಮಾಡುತ್ತೀರಿ, ಅದರಲ್ಲಿ ಪ್ರತೀ ಸಮಯವೂ ತಿದ್ದುಪಡಿ ಮಾಡುವಂತಹ ಅಭ್ಯಾಸಿಯಾಗಿರಬೇಕು. ಎರಡು ಮಾತುಗಳಾಗಿವೆ- ಒಂದು ಯಥಾರ್ಥವಾದ ಸಂಬಂಧ(ಕನೆಕ್ಷನ್), ಮತ್ತೊಂದು ಪ್ರತೀ ಸಮಯದಲ್ಲಿ ತಮ್ಮನ್ನು ಪ್ರತಿಯೊಂದರಲ್ಲಿ ತಿದ್ದುಪಡಿ(ಕರೆಕ್ಷನ್) ಮಾಡುವ ಗಮನವಿರಬೇಕು. ಒಂದು ವೇಳೆ ಎರಡೂ ಮಾತುಗಳಲ್ಲಿ ಒಂದರ ಕೊರತೆಯಿದ್ದರೂ ಸಹ ಸಫಲತಾಮೂರ್ತಿಗಳಾಗಲು ಸಾಧ್ಯವಾಗುವುದಿಲ್ಲ. ತಿದ್ದುಪಡಿ ಮಾಡುವುದಕ್ಕಾಗಿ ಸದಾ ಸಾಕ್ಷಿಸ್ಥಿತಿಯಿರಬೇಕು. ಒಂದು ವೇಳೆ ಸಾಕ್ಷಿಯಾಗಿದ್ದು ತಿದ್ದುಪಡಿ ಮಾಡುವುದಿಲ್ಲವೆಂದರೆ ಯಥಾರ್ಥವಾದ ಸಂಬಂಧವನ್ನಿಡಲು ಸಾಧ್ಯವಿಲ್ಲ. **ಸಾಕಾರ ಸಂಬಂಧದಲ್ಲಿ ಬರುವುದರಲ್ಲಿ ಮರ್ಯಾದಾ ಪೂರ್ವಕವಾಗಿರಬೇಕು. ಹೇಗೆ ಆತ್ಮಿಕ ಪರಿವಾರದ ಸಂಬಂಧವು ಆತ್ಮೀಯತೆಗೆ ಬದಲಾಗಿ ಒಂದು ವೇಳೆ ದೇಹಾಭಿಮಾನದ ಸಂಬಂಧವಿದೆಯೆಂದರೆ ಅದೂ ಸಹ ಯಥಾರ್ಥವಾದ ಸಂಬಂಧವಾಗುವುದಿಲ್ಲ.**

ಯಾರು ಕನೆಕ್ಷನ್ ಮತ್ತು ಕರೆಕ್ಷನ್ (ಸಂಬಂಧ ಮತ್ತು ತಿದ್ದುಪಡಿ) ಮಾಡುವುದನ್ನು ತಿಳಿದುಕೊಂಡಿರುತ್ತಾರೆಯೋ ಅವರು ಸದಾ ಆತ್ಮಿಕ ನಶೆಯಲ್ಲಿರುತ್ತಾರೆ. ಅವರಲ್ಲಿ ಭಿನ್ನ ಮತ್ತು ಪ್ರಿಯರಾಗಿರುವ ಸಮತೋಲನವಿರುತ್ತದೆ. ಕೇವಲ ಬ್ಯಾಲೆನ್ಸ್‌ನ ಆಟವನ್ನು ತೋರಿಸುವುದಕ್ಕಾಗಿ ಸಂಪಾದನೆಯ ಸಾಧನಗಳನ್ನು ಎಷ್ಟೊಂದು ತಯಾರು ಮಾಡಿದ್ದಾರೆ. ಆ ಆಟವಾಗಿ ಸರ್ಕಸ್ ಇದೆ. ಬ್ಯಾಲೆನ್ಸನ್ನು ಚಮತ್ಕಾರದ ರೂಪದಲ್ಲಿ ತೋರಿಸುತ್ತಾರೆಂದರೆ ಇಲ್ಲಿಯೂ ಸಹ ಒಂದು ವೇಳೆ ಬ್ಯಾಲೆನ್ಸ್ ಇದ್ದಾಗ ಚಮತ್ಕಾರವೂ ಆಗುತ್ತದೆ ಮತ್ತು ಸಂಪಾದನೆಯೂ ಆಗುತ್ತದೆ. ಒಂದು ವೇಳೆ ಸ್ವಲ್ಪ ಹೆಚ್ಚುಕಡಿಮೆ ಆದಾಗ ಚಮತ್ಕಾರವೂ ಆಗುವುದಿಲ್ಲ, ಸಂಪಾದನೆಯೂ ಆಗುವುದಿಲ್ಲ. ಹೇಗೆ ಯಾವುದೇ ತಿನ್ನುವಂತಹ ವಸ್ತುವನ್ನು ತಯಾರು ಮಾಡಿದಾಗ ಅದರಲ್ಲಿ ಒಂದುವೇಳೆ ಎಲ್ಲಾ ವಸ್ತುಗಳ ಸಮತೋಲನವಿಲ್ಲವೆಂದರೆ ಅದರಲ್ಲಿ ಎಷ್ಟೇ ಒಳ್ಳೆಯ ವಸ್ತುಗಳಿರಬಹುದು. ಆದರೆ ರುಚಿಯು ಬರುವುದಿಲ್ಲ. ಅಂದಮೇಲೆ ತಮ್ಮ ಜೀವನವನ್ನೂ ಸಹ ಶ್ರೇಷ್ಠ ಹಾಗೂ ಸಫಲವನ್ನಾಗಿ ಮಾಡುವುದಕ್ಕಾಗಿ ಸಮತೋಲನವನ್ನಿಡಿ ಅರ್ಥಾತ್ ಸಮಾನತೆಯನ್ನಿಡಬೇಕು. ಎರಡನೆಯ ಮಾತು - ಎಂತಹ ಸಮಸ್ಯೆ ಮತ್ತು ಸಮಯವಿರುತ್ತದೆಯೋ ಅದೇರೀತಿ ತಮ್ಮ ಶಕ್ತಿಶಾಲಿ ರೂಪವನ್ನು ತಯಾರು ಮಾಡಿಕೊಳ್ಳಲು ಸಾಧ್ಯವಾಗಬೇಕು. ಒಂದು ವೇಳೆ ಪರಿಸ್ಥಿತಿಯು ಎದುರಿಸುವಂತಹದ್ದೇ ಆಗಿರುತ್ತದೆ ಆದರೆ ಎದುರಿಸುವಂತಹ (ಧೈರ್ಯ) ಶಕ್ತಿ ಸ್ವರೂಪರಾಗಿಬಿಡಿ. ಒಂದು ವೇಳೆ ಸಹನೆ ಮಾಡುವಂತಹ ಪರಿಸ್ಥಿತಿಯಿರಬಹುದು ಆಗ ಸಹನಾಶಕ್ತಿಯ ಸ್ವರೂಪರಾಗುವಂತಹ ಅಭ್ಯಾಸಿಯಾಗಿರಬೇಕು. ಟೀಚರ್ಸ್ ಎಂದರೆ ಬ್ಯಾಲೆನ್ಸ್. ಎಂತಹ ಸಮಯವೋ ಅಂತಹ ಸ್ವರೂಪವನ್ನು ಧಾರಣೆ ಮಾಡುವಂತಹ ಶಕ್ತಿಯಿರಲಿ. ಒಂದು ವೇಳೆ ಸ್ನೇಹದ ಸ್ಥಾನದಲ್ಲಿ ಶಕ್ತಿಯನ್ನು ಧಾರಣೆ ಮಾಡಿ ಮತ್ತು ಶಕ್ತಿಯ ಸ್ಥಾನದಲ್ಲಿ ಸ್ನೇಹವನ್ನು ಧಾರಣೆ ಮಾಡಿದರೆ ಏನೆಂದು ಹೇಳುವುದು? ಅರ್ಥಾತ್ ಎಂತಹ ಸಮಯವೋ ಅಂತಹ ಸ್ವರೂಪವನ್ನು ಧಾರಣೆ ಮಾಡುವ ಶಕ್ತಿಯಿಲ್ಲ. ಅಂದಮೇಲೆ ಸೇವೆಯ ಫಲಿತಾಂಶವೂ ಬರುವುದಿಲ್ಲ ಮತ್ತು ಸಫಲತೆಯೂ ಆಗುವುದಿಲ್ಲ. ಒಂದು ವೇಳೆ ನಂಬರ್‌ವನ್

ಟೀಚರ್ ಆಗಬೇಕೆಂದರೆ ಯಾವುದೇ ಧಾರಣೆಯಿರಬಹುದು. ಅದನ್ನು ಮೊದಲು ಸ್ವಯಂನಲ್ಲಿ ಧಾರಣೆ ಮಾಡಿಕೊಂಡು ನಂತರ ಹೇಳಬೇಕು. ಸ್ವಯಂ ಮಾಡುವುದಿಲ್ಲ, ಅನ್ಯರಿಗೆ ಹೇಳುವವರು ಎನ್ನುವಂತೆ ಆಗಬಾರದು. ಕೇವಲ ಯಾರು ಅನ್ಯರಿಗೆ ಡೈರೆಕ್ಷನ್‌ನ್ನು ಕೊಡುತ್ತಾರೆಯೋ ಅವರು ಮೊದಲು ಸ್ವಯಂನಲ್ಲಿ ನೋಡಿಕೊಳ್ಳಿ ಅದು ನನ್ನಲ್ಲಿದೆಯೇ! ಅನ್ಯರಿಗೆ ಸಹನಶೀಲರಾಗಿ ಎಂದು ಹೇಳಿ ಮತ್ತೆ ಸ್ವಯಂ ಆಗಲಿಲ್ಲವೆಂದರೆ ಅವರು ಟೀಚರ್ಸ್ ಆಗುವುದಿಲ್ಲ. ಟೀಚರ್ ಎಂದರೆ ಶಿಕ್ಷಕ ಅರ್ಥಾತ್ ಶಿಕ್ಷಣವನ್ನು ಕೊಡುವವರು. ಒಂದು ವೇಳೆ ಸ್ವಯಂ ಶಿಕ್ಷಕನ ಸ್ವರೂಪವಾಗುವುದಿಲ್ಲವೆಂದರೆ ಅವರು ಯಥಾರ್ಥವಾದ ಶಿಕ್ಷಕನೆಂದು ಕರೆಸಿಕೊಳ್ಳಲು ಸಾಧ್ಯವಿಲ್ಲ. ಸದಾ ಈ ಸ್ಲೋಗನ್‌ನ್ನು ನೆನಪಿಟ್ಟುಕೊಳ್ಳಿ- ಶಿಕ್ಷಕ ಅರ್ಥಾತ್ ಶಿಕ್ಷಕನ ಸ್ವರೂಪ ಮತ್ತು ಬ್ಯಾಲೆನ್ಸ್ ಇಡುವವರು. ಈಗ ಕ್ವಾಲಿಟಿಯಿರುವಂತಹ ಟೀಚರ್ ಆಗಬೇಕಾಗಿದೆ. ಕ್ವಾಂಟಿಟಿಯ ಮೇಲೆ ದೃಷ್ಟಿ ಹೋಗಬಾರದು. ಕ್ವಾಲಿಟಿಯಿರುವವರೇ ಎಲ್ಲರ ಕಲ್ಯಾಣಕ್ಕೆ ನಿಮಿತ್ತರಾಗಲು ಸಾಧ್ಯ. ಅಂದಮೇಲೆ ಈಗ ಟೀಚರ್‌ನ ಕ್ವಾಂಟಿಟಿ ವೃದ್ಧಿಯಾಗಬಾರದು ಆದರೆ ಕ್ವಾಲಿಟಿಯು ವೃದ್ಧಿಯಾಗಬೇಕು. ತಿಳಿಯಿತೆ!

ಅವ್ಯಕ್ತ ಮುರಳಿ 08-07-1976.

***ಕನೆಕ್ಷನ್ ಮತ್ತು ಕರೆಕ್ಷನ್ ನ ಬ್ಯಾಲೆನ್ಸ್ ನಿಂದ ಅದ್ಭುತ(ಕಮಾಲ್)***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ಮಧುಬನದಲ್ಲಿ ತಂದೆಯೊಂದಿಗೆ, ದೈವೀ ಪರಿವಾರದೊಂದಿಗೆ ಮರ್ಯಾದಾಪೂರ್ವಕವಾದ ಸಂಬಂಧ (ಕನೆಕ್ಷನ್) ಮತ್ತು ಸಾಕ್ಷಿಯಾಗಿ ಅದನ್ನು ತಿದ್ದುಪಡಿಸಿರುವ(ಕರೆಕ್ಷನ್) ಸಫಲತಾ ಮೂರ್ತಿ.

2. ನಾನು ನನ್ನನ್ನು ತಿದ್ದಿಕೊಳ್ಳುವುದು(ಕರೆಕ್ಷನ್) ಮತ್ತು ಸಂಬಂಧ(ಕನೆಕ್ಷನ್) ಇಟ್ಟುಕೊಂಡು ಆತ್ಮಿಕ ನಶೆಯಲ್ಲಿ ಇರುತ್ತಾ ಅತೀತ ಸ್ಥಿತಿ, ಅತಿಪ್ರಿಯ ಸ್ಥಿತಿ ಎರಡನ್ನು ಸಮಾನವಾಗಿ ಇಟ್ಟುಕೊಂಡು ಅದ್ಭುತ ಮಾಡಿ, ಸಂಪಾದನೆ ಮಾಡಿಕೊಂಡಿದ್ದೇನೆ.

3. ನಾನು ಎಂತಹ ಸಮಯವೋ ಅಂತಹ ಸ್ವರೂಪವನ್ನು ಧಾರಣೆ ಮಾಡಿ ಶಕ್ತಿಯನ್ನು ತುಂಬಿಕೊಂಡು ಸರ್ವಿಸ್ ನಲ್ಲಿ ಸಫಲತೆಯನ್ನು ಪಡೆದಿದ್ದೇನೆ.

4. ನಾನು ಶಿಕ್ಷಣಾ ಸ್ವರೂಪ ಮತ್ತು ಸಮಾನತೆಯನ್ನು ಉಳಿಸಿಕೊಂಡಿರುವ ಯಥಾರ್ಥ ಟೀಚರ್.